ಶ್ರೀ ಎಸ್. ಬಿ. ನಾಗರಾಳ್.—ನೀರು ಸರಿಯಾದ ಪ್ರಮಾಣದಲ್ಲಿ ಸಿಕ್ಕುತ್ತದೆ ಎನ್ನುವ ತಾಂತ್ರಿಕ ಅಭಿಪ್ರಾಯ ಬಾರದ ಏನಾ ಏನೂ ಮಾಡುವುದಕ್ಕಾಗುವದಿಲ್ಲ. ಈಗ ಪದ್ಯಕ್ಕೆ ಮುಂಮೊಡಲಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸೀಗೇಹಳ್ಳಿ ಪ್ರಾಜೆಕ್ಟ್ ಕಾರ್ಯಗತವಾಗದೆ ಇರುವುದಕ್ಕೆ ಕಾಂಗ್ರೆಸ್ (ಒ) ಮತ್ತು (ಆರ್) ಪಕ್ಷಗಳಲ್ಲಿರುವ ರಾಜಕಾರಣವೇ ಮುಖ್ಯವಾದ ಅಡ್ಡಿ ಎನ್ನುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಬಿ. ನಾಗರಾಳ್.—ಅದೇನೂ ಇಲ್ಲ. ನೀರು ಸರಿಯಾದ ದೃಷ್ಟಿಯಿಂದ ಸಿಕ್ಕುತ್ತಿಲ್ಲವಾದ್ದರಿಂದ ಆ ಯೋಜನೆ ಸಫಲವಾಗುವುದಿಲ್ಲವೆನ್ನುವ ಅಭಿಪ್ರಾಯಗಳು ಬಂದು ಒಂದು ವರ್ಷ ಗೇಜ್ ಮಾಡಲಾಯಿತು. ಒಂದು ವರ್ಷದ ನಂತರ ನೀರು ಸಿಕ್ಕುವ ವಿಚಾರದಲ್ಲಿ ತಾಂತ್ರಿಕ ಅಭಿಪ್ರಾಯ ಸರಿಯಾಗಿ ಬರಲಿಲ್ಲ. ಆದ್ದರಿಂದ ಇನ್ನೂ ಒಂದು ವರ್ಷ ಗೇಜ್ ಮಾಡಿ ನೀರು ಸರಿಯಾಗಿ ಸಿಕ್ಕುತ್ತದೆ ಎಂದು ತಿಳಿದಾಗ ಅದನ್ನು ಮಾಡುತ್ತೇವೆನ್ನುವ ವಿಷಯವನ್ನು ಕೇಳಿದ್ದೇನೆ. ಮಾನ್ಯ ಲಿಂಗಪ್ಪನವರಿಗೆ ರಾಜಕೀಯ ಹೂಡುವಂಥ ಉದ್ದೇಶವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ

ಶ್ರೀ ಎಸ್. ಎಂ. ಶೀರ ರಾಳಿ ಚಂದ್ರಶೇಖರ್.—ಈ ಸದನ ಪ್ರಾರಂಭವಾದಾಗ ನಾನು ಪ್ರಶ್ನೆ ಕೇಳಿದೆ. ಆಗ ಮಾನ್ಯ ಚನ್ನಬಸಪ್ಪನವರು ಒಂದು ವರ್ಷಕಾಲ ಅವಕಾಶಬೇಕು, ಗೇಜಿಂಗ್ ಆದ ನಂತರ ಕಾರ್ಯವನ್ನು ಕೈಗೊಳ್ಳುತ್ತೇವೆಂದು ಕ್ಯಾಟಗಾರಿಕಲ್ ಆಗಿ ಹೇಳಿದ್ದರು. ಈಗ ಮಾನ್ಯ ಮಂತ್ರಿಗಳು ಇನ್ನೂ ಗೇಜಿಂಗ್ ನಡೆಯುತ್ತಿದೆ ಎಂದು ಹೇಳುತ್ತಾರೆ. ಕಾರ್ಯವನ್ನು ತೆಗೆದುಕೊಳ್ಳಲು ಇನ್ನೂ ಎಷ್ಟು ವರ್ಷ ಬೇಕು ?

ಶ್ರೀ ಎಸ್. ಬಿ. ನಾಗರಾಳ್.—ಈಗ ಸರ್ವೇಸಾಧಾರಣ 500ಎಕರೆಯಷ್ಟು ಪ್ರದೇಶಕ್ಕೆ ಗೈರು ಹುಕುಂನಿಂದ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದು ಎಷ್ಟು ಪ್ರಮಾಣದ ನೀರು ದೊರೆಯುತ್ತದೆ ಎಂದು ತಿಳಿಯಲಾರದೆ ಇದೆ. 50-60 ಅಂಗುಲ ಮಳೆ ಬೀಳುತ್ತಿದ್ದುದು ಈಗ ಮೂರು ವರ್ಷಗಳಿಂದ 25-30 ಅಂಗುಲ ಮಳೆ ಬೀಳುವುದಕ್ಕೆ ಪ್ರಾರಂಭವಾಗಿದೆ. ಸರಿಯಾದ ಪ್ರಮಾಣದಲ್ಲಿ ನೀರು ಬರುವುದಿಲ್ಲವೆನ್ನುವ ಆ ಅಭಿಪ್ರಾಯ ಬಂದಿದ್ದು ಇನ್ನೂ ಒಂದೂ ವರ್ಷದವರೆಗೆ ಗೇಜ್ ಮಾಡಿ ಸರಿಯಾದ ಪ್ರಮಾಣದಲ್ಲಿ ನೀರು ದೊರೆಯುತ್ತದೆ ಎನ್ನುವುದು ಖಾತ್ರಿಯಾದಾಗ ಎಲ್ಲ ವಿಚಾರಗಳನ್ನೂ ಪರ್ಯಾಲೋಚಿಸಿ ಆ ಯೋಜನೆಯನ್ನು ಎತ್ತಿಕೊಳ್ಳುವ ವಿಚಾರದಲ್ಲಿ ತೀರ್ಮಾನ ಮಾಡುತ್ತೇವೆ.

BUS DEPOT AT LAXMESHWAR

212. SRI V. V. WAI (Shirahatti).—

Will the Minister for Transport and Housing be pleased to state.—

(a) whether it has come to the notice of the Government that 60-70 buses ply daily from Laxmeshwar Bus Stand to various parts of the State ;

(b) whether it has come to their notice that as the failed buses are required to be repaired at far away Depots of Hubli, Haveri and Gadag thus causng inconvenience to the passengers due to delay ;

(c) when the 15—20 years old demand of the people of this area to have a bus depot at Laxmeshwar to eliminate this hardship will be met ;

(d) whether they are aware that if a depot is established at Laxmeshwar the burden of repair work gets divided and they are attended quickly thereby preventing inconvenience to the travelling public ;

(e) if so, whether the Government would consider and take steps expeditiously to establish a depot at Laxmeshwar ;

(f) whether it has come to their notice that spot inspection has been done in this behalf ?

Sri K. H. RANGANATH (Minister for Transport and Housing).—

(a) Yes.

(b) In case of failure of buses they have to go to nearest bus depot for repairs. As Gadag depot which is at a distance of 25 miles only from Laxmeshwar the buses will be sent there early and repairs got done. It will be ensured that no inconvenience is caused to travellers.

(c) This matter was considered earlier. It is found unnecessary to start a bus depot at Laxmeshwar from economic and administrative ponts of view.

(d) This question does not arise in view of reply to above clause.

(e) The K.S.R.T.C. will examine this point from economic and administrative points of view.

(f) Yes.

ಶ್ರೀ ವಿ. ವಿ. ಪಾಯಿ.—ಲಕ್ಷೇಶ್ವರದಿಂದ 25 ಮೈಲುಗಳ ದೂರದಲ್ಲಿ ಒಂದು ಡಿಪೋ ಇದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದಕ್ಕಿಂತ ಮುಂದೆ 30-40 ಮೈಲು ದೂರ ಡಿಪೋ ಇಲ್ಲದೆ ಇರುವ ಕಾರಣ ಬೇರೆ ಬಸ್ ಬಂದು ಕೆಟ್ಟುಹೋದ ಬಸ್ಸನ್ನು ಎಳೆದುಕೊಂಡು ಹೋಗಿ ರಿಪೇರಿ ಮಾಡಿ ಕಳುಹಿಸಬೇಕಾದ ಪರಿಸ್ಥಿತಿ ಇರುವುದರಿಂದ ಲಕ್ಷೇಶ್ವರದಲ್ಲಿ ಒಂದು ಡಿಪೋ ಮಾಡುವುದನ್ನು ವಿಚಾರ ಮಾಡುತ್ತಾರೆಯೇ ?

† ಶ್ರೀ ಕೆ. ಎಚ್. ರಂಗನಾಥ್.—ಅದು ಊಹಾಪೋಹದ ಪ್ರಶ್ನೆ.

ಶ್ರೀ ವಿ. ವಿ. ಪಾಯಿ. ಲಕ್ಷೇಶ್ವರ ಮಾರ್ಗದಲ್ಲಿ ಹಿಂದೆ 25-30 ಬಸ್ಸುಗಳು ಹೋಗುತ್ತಿದ್ದು ಈಗ 50-60 ಬಸ್ಸುಗಳು ಆ ಭಾಗದಲ್ಲಿ ಓಡಾಡುತ್ತಿವೆ. ಅಲ್ಲಿ ಜನಸಂಖ್ಯೆ ಕೂಡ ಹೆಚ್ಚಾಗಿದೆ. ಬಸ್ಸನ್ನು ರಿಪೇರಿ ಮಾಡಬೇಕಾದರೆ ಗದಗ್ ಡಿಪೋಗೆ ಹೋಗಬೇಕಾಗಿದೆ. ಆದ್ದರಿಂದ ಲಕ್ಷೇಶ್ವರದಲ್ಲಿ ಒಂದು ಡಿಪೋ ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ರಂಗನಾಥ್.—ಲಕ್ಷೇಶ್ವರದಿಂದ ಯಾವ ಬಸ್ಸೂ ಹೊರಡುವುದಿಲ್ಲ. ಬಸ್ಸುಗಳು ಲಕ್ಷೇಶ್ವರದ ಮೂಲಕ ಹೋಗುತ್ತವೆ. ಮಾನ್ಯ ಸದಸ್ಯರು ಹೇಳುವಂತೆ ಪ್ರತಿದಿನ 50-60 ಬಸ್ಸುಗಳು ಹೋಗುತ್ತಿರುವುದು ನಿಜ. ಲಕ್ಷೇಶ್ವರಕ್ಕೆ ಕೇವಲ 25 ಮೈಲು ದೂರದಲ್ಲಿ ಗದಗ್‌ನಲ್ಲಿ ಒಂದು ಡಿಪೋ ಇದೆ, 30 ಮೈಲು ದೂರದಲ್ಲಿ ಹುಬ್ಬಳ್ಳಿಯಲ್ಲಿ ಒಂದು ಡಿಪೋ ಇದೆ, 40 ಮೈಲು ದೂರದಲ್ಲಿ ಹಾವೇರಿಯಲ್ಲಿ ಒಂದು ಡಿಪೋ ಇದೆ. ಮತ್ತೆ ಲಕ್ಷೇಶ್ವರದಿಂದ ಬಸ್ಸುಗಳು ಹೊರಡುವ ವ್ಯವಸ್ಥೆ ಯಾದರೆ ಡಿಪೋ ಮಾಡುವ ವಿಚಾರವನ್ನು ನೋಡಲಾಗುವುದು.

ಶ್ರೀ ಎಂ. ಎಸ್ ಕೃಷ್ಣನ್.—ಡಿಪೋ ಪ್ರಾರಂಭ ಮಾಡಬೇಕಾದರೆ ಎಕನಾಮಿಕ್ ಮತ್ತು ಅಡ್ಮಿನಿಸ್ಟ್ರೇಟಿವ್ ಪಾಯಿಂಟ್ಸ್ ಎರಡನ್ನೂ ಗಣನೆಗೆ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಇದನ್ನು ಸ್ವಲ್ಪ ವಿಶದಪಡಿಸುತ್ತಾರೆಯೇ ?

ಶ್ರೀ ಕೆ. ಎಚ್. ರಂಗನಾಥ್.—ಒಂದು ಡಿಪೋ ಮಾಡಬೇಕಾದರೆ ಅಲ್ಲಿಂದ ಎಷ್ಟು ಬಸ್ಸುಗಳು ಹೊರಡುತ್ತವೆ ಎನ್ನುವುದನ್ನು ನೋಡಬೇಕು. How many buses radiate from that particular depot will have to be taken into consideration. ಅಲ್ಲದೆ ರೆವೆನ್ಯೂ ಎಷ್ಟು ಬರುತ್ತದೆ ಎನ್ನುವುದನ್ನೂ ನೋಡಬೇಕು. Laxmeshwar is not such a centre from where a number of buses start.

ಶ್ರೀ ವಿ. ಎ. ಪಾಯಿ.—ಮುಂದೆ ಡಿಫ್ಲೋ ಮಾಡುವ ಬಗ್ಗೆ ವಿಚಾರ ಮಾಡುತ್ತಾರೆಯೆ ?

ಶ್ರೀ ಕೆ. ಎಚ್. ರಂಗನಾಥ್.— ವಿಚಾರ ಮಾಡೋಣ.

PURCHASE OF SUGAR CANE BY THE SUGAR FACTORIES

234. Shri P. P. HEGRE (Chikodi)—

Will the Minister for Industries and Parliamentary Affairs be pleased to state :—

(a) whether a specific area is earmarked for a sugar factory, for purchasing sugar cane grown in that area in respect of various sugar factories in the State ;

(b) whether all the sugar cane growers in the specified area are bound by any rules to be the members of the sugar factory in that area ;

(c) if not, whether it is compulsory for all the sugar cane growers in the area to supply their sugar cane to the factory ;

(d) if so, whether the sugar factory, in the area is also bound by rules to purchase all the sugar cane grown in the area ?

Sri S. M. KRISHNA (Minister for Industries and Parliamentary Affairs).—

(a) A specific area is earmarked whenever the factory requests for such demarcation.

(b) No.

(c) In the event of reservation orders being issued under the Sugar Cane (Control) Order, 1966, 95 per cent of the sugar cane grown has to be supplied by the growers to the factory and **Pari** Passu.

(d) The factory is bound to purchase the cane supplied.

ಶ್ರೀ ಪಿ. ಪಿ. ಹೆಗಡೆ.—ಪ್ರಶ್ನೆಯ (ಅ) ಮತ್ತು (ಇ) ಭಾಗಕ್ಕೆ ಕೊಟ್ಟಿರುವ ಉತ್ತರಗಳನ್ನು ನೋಡಿದರೆ ಕಬ್ಬು ಬೆಳೆಯುವ ರೈತ ತನಗೆ, ಫಾಯಿದೆಯಾಗುವ ರೀತಿಯಲ್ಲಿ ಉಪಯೋಗಮಾಡಿ ಕೊಳ್ಳಬೇಕು ಎನ್ನುವ ಸ್ವಾತಂತ್ರ್ಯವನ್ನು ಕಸಿದು ಕೊಂಡಂತಾಗುವುದಿಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.— ನಕ್ಕರೆ ಕಾರ್ಖಾನೆ ಯಾವ ಪ್ರದೇಶದಲ್ಲಿದೆ ಆ ಪ್ರದೇಶದಲ್ಲಿ ಅದರ ಸುತ್ತಮುತ್ತಲ ಭಾಗದಲ್ಲಿ ಬೆಳೆಯತಕ್ಕ ಕಬ್ಬು ಕಾರ್ಖಾನೆಗೆ ಹೊರಕಡೆ ಹೋದರೆ ಕಾರ್ಖಾನೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಬರುವುದರಿಂದ ಕಬ್ಬು ಬೆಳೆಯತಕ್ಕ ರೈತರ ಮೇಲೆ ಕೊಂಚಮಟ್ಟಿನ ನಿಯಂತ್ರಣ ಅಗತ್ಯ ಎನ್ನುವುದು ಸರ್ಕಾರದ ಅಭಿಪ್ರಾಯ.

ಶ್ರೀ ಪಿ. ಪಿ. ಹೆಗಡೆ.—ಹಾಗೆ ನಿಯಂತ್ರಣವಿದ್ದಾಗ, ಕಬ್ಬು ಬೆಳೆಗಾರರಿಗೆ ಯೋಗ್ಯವಾದ ಬೆಲೆ ದೊರೆಯಬೇಕು ಎನ್ನುವ ನೀತಿ ಇರಬೇಕು. ಬೇರೆ ಬೇರೆ ಕಾರ್ಖಾನೆಯವರು ಬೇರೆ ಬೇರೆ ದರವನ್ನು ಕೊಡುವುದರಿಂದ ಹೆಚ್ಚಿನ ದರ ಎಲ್ಲಿ ಸಿಕ್ಕುತ್ತದೆಯೋ ಅಲ್ಲಿ ವ್ಯಾಪಾರ ಮಾಡಬಹುದು, ಆ ಪ್ರದೇಶಕ್ಕೆ ಸಂಬಂಧಪಟ್ಟ ಕಾರ್ಖಾನೆ ದರ ಕಡಮೆ ಕೊಟ್ಟರೆ ರೈತನಿಗೆ ಲುಕ್ಸಾನಾಗುತ್ತದೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?